ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ 74/2023**

ಪ್ರ.ವ.ಬೋ.ತಾಃ 06-11-2024

ಚಾಸಾಃ 1 ಪ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ಕುಮಾರ್ |
| ತಂದೆ/ಗಂಡನ ಹೆಸರು | ಚಿಕ್ಕರಾಮಯ್ಯ |
| ವಯಸ್ಸು | 40 ವರ್ಷ |
| ವೃತ್ತಿ | ಪಿ.ಡಿ.ಒ. ಬ್ಯಾಲ್ಯ ಗ್ರಾಮ ಪಂಚಾಯಿತಿ |
| ವಾಸ | ಮಧುಗಿರಿ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಈಗ್ಗೆ ಎರಡು ವರ್ಷದಿಂದ ನಾನು ಬ್ಯಾಲ್ಯ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. 1 ನೇ ಆರೋಪಿ ಬಿಲ್ ಕಲೆಕ್ಟರ್ ಆಗಿ ಮತ್ತು 2 ನೇ ಆರೋಪಿ ಪಿ.ಡಿ.ಒ. ಆಗಿ ಬ್ಯಾಲ್ಯ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

2020 ರ ಜೂನ್ ಮತ್ತು ಜುಲೈ ತಿಂಗಳಂದು 1 ನೇ ಆರೋಪಿ ಹೆಚ್ಚಿನ ವೇತನವನ್ನು ಪಡೆದುಕೊಂಡಿದ್ದರು. 2 ನೇ ಆರೋಪಿ 1 ನೇ ಆರೋಪಿಗೆ ಹೆಚ್ಚುವರಿಯಾಗಿ ವೇತನ ಪಾವತಿ ಮಾಡಿದ್ದಾರೆ. ಈ ಬಗ್ಗೆ ಮಧುಗಿರಿ, ತುರುವೇಕೆರೆ ಹಾಗೂ ತುಮಕೂರು ಇ.ಒ. ರವರು ಸಿ.ಇ.ಒ. ರವರಿಗೆ ವರದಿ ಮಾಡಿದ್ದರು. ದಿನಾಂಕಃ 20-04-2022 ರಂದು

ಜಿಲ್ಲಾಧಿಕಾರಿಗಳ ಕಚೇರಿ ತುಮಕೂರಿನಲ್ಲಿ ಸಭೆ ನಡೆದಿದ್ದು ಅಲ್ಲಿ ಜಿಲ್ಲಾಧಿಕಾರಿಗಳು ಹಣ ದುರುಪಯೋಗ ಮತ್ತು ಅವ್ಯವಹಾರದ ಬಗ್ಗೆ ಚರ್ಚೆಗೆ ಬಂದು ನನಗೆ ಹಣ ದುರುಪಯೋಗವಾಗಿರುವ ಬಗ್ಗೆ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದೂರು ನೀಡುವಂತೆ ನಿರ್ದೇಶನ ಕೊಟ್ಟರು. ಅದರಂತೆ ನಾನು ದಿನಾಂಕಃ 25-04-2022 ರಂದು ಇ.ಒ.ರವರ ಆದೇಶ ಮಾಡಿದರು. ಸದರಿ ಆದೇಶದಂತೆ ನಾನು ದಿನಾಂಕಃ 27-04-2022 ರಂದು ಸಂಜೆ 5.30 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿದ ದೂರಾಗಿದ್ದು ಅದರಲ್ಲಿರುವ ಸಹಿ ನನ್ನದೆ. ದೂರನ್ನು ನಿಪಿ.1 ಎಂದು, ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ದಿನಾಂಕಃ 28-04-2022 ರಂದು ಸಂಜೆ 4.30-5.30 ಗಂಟೆಯವರೆಗೆ ಚಾ.ಸ.16 ಮತ್ತು 17 ರವರ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆ ಪಂಚನಾಮೆಯಾಗಿದ್ದು ಅದರಲ್ಲಿರುವ ಸಹಿ ನನ್ನದೆ. ಪಂಚನಾಮೆಯನ್ನು ನಿಪಿ.2 ಎಂದು, ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ದೂರು ಕೊಡುವ ಕಾಲಕ್ಕೆ ನಾನು ಜಂಟಿ ತನಿಖಾ ವರದಿ, ವೇತನ ಬಟಾವಡೆ ರಿಜಿಸ್ಟರ್, ಜಿ.ಪಿ.ಎಸ್. ಫೋಟೋ ದಾಖಲಾತಿಗಳು, ನಿವೇಶನ ಮತ್ತು ಮನೆ ಮಂಜೂರಾತಿ ದಾಖಲೆಗಳನ್ನು ಕೊಟ್ಟಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಗಳು ಜಂಟಿ ತನಿಖಾ ವರದಿ, ವೇತನ ಬಟಾವಡೆ ರಿಜಿಸ್ಟರ್, ಜಿ.ಪಿ.ಎಸ್. ಫೋಟೋ ದಾಖಲಾತಿಗಳು, ನಿವೇಶನ ಮತ್ತು ಮನೆ ಮಂಜೂರಾತಿ ದಾಖಲೆಗಳಾಗಿರುತ್ತವೆ.

ಅವುಗಳನ್ನು ಕ್ರಮವಾಗಿ ನಿಪಿ.3 ರಿಂದ 6 ಎಂದು ಗುರುತಿಸಲಾಯಿತು. ನಿಪಿ.4 ರಿಂದ 6 ರಲ್ಲಿರುವ ಸಹಿ ನನ್ನದೆ. ಅವುಗಳನ್ನು ಕ್ರಮವಾಗಿ ನಿಪಿ .4(ಎ) ರಿಂದ 6(ಎ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ಪೊಲೀಸರು ಸ್ಥಳದಲ್ಲಿ ಪೊಟೋ ತೆಗೆದಿರುತ್ತಾರೆ.

ದಿನಾಂಕಃ 07-05-2022 ರಂದು ಪೊಲೀಸರು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಕೊಡುವಂತೆ ಮನವಿ ಮಾಡಿರುತ್ತಾರೆ. ದಿನಾಂಕಃ 11-07-2022 ರಂದು ಸಂಬಂಧಪಟ್ಟ ದಾಖಲಾತಿಗಳನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ. ದಿನಾಂಕಃ 14-09-2022 ರಂದು ಕರ ವಸೂಲಿದಾರರ ಸೇವಾ ವಿವರವನ್ನು ಕೊಡುವಂತೆ ಪೊಲೀಸರು ಮನವಿ ಮಾಡಿದ್ದು ನಾನು ದಿನಾಂಕಃ 17-09-2022 ರಂದು ಎರಡು ಸಭಾ ನಡವಳಿಕೆಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಗಳು ಎರಡು ಸಭಾ ನಡವಳಿಕೆಯನ್ನು ಸಲ್ಲಿಸುತ್ತಿರುವ ಬಗ್ಗೆ ಕವರಿಂಗ್ ಲೆಟರ್ ಮತ್ತು ಎರಡು ಸಭಾ ನಡವಳಿಕೆಗಳಾಗಿರುತ್ತವೆ. ಕವರಿಂಗ್ ಲೆಟರ್ ಮತ್ತು ಎರಡು ಸಭಾ ನಡವಳಿಕೆಗಳನ್ನು ಕ್ರಮವಾಗಿ ನಿಪಿ.7 ರಿಂದ 9 ಎಂದು, ನಿಪಿ.7 ರಿಂದ 9 ರಲ್ಲಿರುವ ಸಹಿ ನನ್ನದೆ. ಅವುಗಳನ್ನು ಕ್ರಮವಾಗಿ ನಿಪಿ7(ಎ) ರಿಂದ 9(ಎ) ಎಂದು ಗುರುತಿಸಲಾಯಿತು. ಪೊಲೀಸರು ಪ್ರಶ್ನಾರ್ತಕವಾಗಿ ಕೋರಿದ ಮಾಹಿತಿಗೆ ನಾನು ಉತ್ತರ ಕೊಟ್ಟಿದ್ದು ಈಗ ನಾನು ನೋಡುತ್ತಿರುವ ದಾಖಲೆ ಕೇಳಿರುವ ಮಾಹಿತಿಗೆ ಉತ್ತರ ಕೊಟ್ಟ ದಾಖಲೆಯಾಗಿದ್ದು ಅದನ್ನು ನಿಪಿ.10 ಎಂದು, ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ನಿಪಿ.8 ಮತ್ತು 9 ದಾಖಲೆ 1 ನೇ ಆರೋಪಿಯನ್ನು ಜವಾನ ಹುದ್ದೆಗೆ ನೇಮಕ ಮಾಡಿಕೊಂಡ ಬಗ್ಗೆ ಮತ್ತು

ಜವಾನ ಹುದ್ದೆಯಿಂದ ಬಿಲ್ ಕಲೆಕ್ಟರ್ ಹುದ್ದೆಗೆ ಪದೋನ್ನತಿ ಹೊಂದಿದ ಬಗ್ಗೆ ಆದ ಸಭಾ ನಡವಳಿಕೆಯಾಗಿರುತ್ತದೆ.

**ಪಾಟೀ ಸವಾಲುಃ- ಆರೋಪಿತರ ಪರವಾಗಿ ವಕೀಲರಿಂದಃ-**

ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ